**ಪಿಡಬ್ಲೂ 1** **ಅಸಲು ದಾವೆ ನಂ.37/2020**

ದಿನಾಂಕ 29-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮೂಂದುವರೆದ ಪಾಟೀಸವಾಲುಃ ಶ್ರೀ. ಕೆ. ಬಿ. ಜಿ. ಪ್ರತಿವಾದಿ ಪರ ವಕೀಲರಿಂದಃ-**

17. ದಾನ ಮಾಡಿ ಕೊಟ್ಟ ಆಸ್ತಿಯ ಸಂಖ್ಯೆ ಸರ್ವೆ ನಂ.18, ಅದರ ಒಟ್ಟು ವಿಸ್ತೀರ್ಣ 10 ಎಕರೆ 30 ಗುಂಟೆ ಎಂದರೆ ಸರಿ. ಇಲ್ಲಿಯವರೆಗೆ ನನಗೆ ಆಸ್ತಿಯಲ್ಲಿ ಭಾಗ ಕೊಟ್ಟಿರುತ್ತಾರೆ, ನನಗೊಬ್ಬಳಿಗೆ ಮಾತ್ರ ಆಸ್ತಿಯಲ್ಲಿ ಭಾಗ ಕೊಟ್ಟಿರುತ್ತಾರೆ, ಬೇರೆಯವರಿಗೆ ಕೊಟ್ಟಿರುವುದಿಲ್ಲ. ಇನ್ನೂ ಸ್ವಲ್ಪ ಆಸ್ತಿ ಕೊಡು ಎಂದು ಕೇಳಲು ನಾನು ಹೋಗಿದ್ದೆ, ಆದರೆ ಅವರು ಕೊಟ್ಟಿರುವುದಿಲ್ಲ.

18. ಸಾಕ್ಷಿ ಮಹಾಂತಯ್ಯರವರು 7 ನೇ ಪ್ರತಿವಾದಿಯ ಗಂಡ ಎಂದರೆ ಸರಿ. ಸಾಕ್ಷಿ ಆನಂದಪ್ಪ ತಂದೆ ಕಲ್ಲಪ್ಪ, ವಾಸ ಬಂಕಾಪುರ ರವರು ನನಗೆ ಪರಿಚಯ. ಈ ದಾವೆಯಲ್ಲಿ ಮಹಾಂತಯ್ಯರವರು ಸಾಕ್ಷಿ ಹೇಳಿದರೆ ಅವರ ಹೆಂಡತಿಗೂ ಸಹ ಆಸ್ತಿಯಲ್ಲಿ ಭಾಗ ಬರುತ್ತದೆ ಎಂದರೆ ಸರಿ.

19. ನಮ್ಮ ಕುಟುಂಬಕ್ಕೆ ಸೇರಿದ ಮನೆಗಳು ಮತ್ತು ಪ್ಲಾಟುಗಳು ಇವೆ, ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಹೌದು ಸೇರಿಸಿಲ್ಲ ಎನ್ನುತ್ತಾರೆ.

20. ದಾವಾ ಆಸ್ತಿಯ ಉಳುಮೆಯನ್ನು ಮೊದಲಿನಿಂದಲೂ 1, 3 ರಿಂದ 5 ನೇ ಪ್ರತಿವಾದಿಗಳು ಉಳುಮೆ ಮಾಡುತ್ತಿದ್ದಾರೆ, ನಿಮಗೆ ಸ್ವಾಧೀನಕ್ಕೆ ಇಲ್ಲ ಎಂದರೆ ಸರಿ.

21. ಆಸ್ತಿಯಲ್ಲಿ ಪಾಲು ಕೇಳಲು ನಾನು ಒಬ್ಬಳೇ ಹೋಗಿದ್ದೆ, ನನ್ನ ಜೊತೆಗೆ ಬುದ್ಧಿವಂತರು ಯಾರೂ ಬಂದಿರಲಿಲ್ಲ. ಅಂದಿನಿಂದ ನನ್ನ ತಂದೆಯ ನಂತರದಲ್ಲಿ ದಾವಾ ಆಸ್ತಿಗಳು ಪ್ರತಿವಾದಿ 1, 3 ರಿಂದ 5 ರವರ ಹೆಸರಿನಲ್ಲಿ ಇವೆ ಎಂದರೆ ಸರಿ. ನಿಮ್ಮ ತಂದೆ-ತಾಯಿಯ

ಆರೋಗ್ಯ ಈಗ ಸರಿಯಿಲ್ಲ ಸಾಕ್ಷಿಯು 5-6 ವರ್ಷಗಳಿಂದ ಸರಿಯಿಲ್ಲ ಎನ್ನುತ್ತಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಹಲವಾರು ಖರ್ಚು ಮಾಡಿರುತ್ತಾರೆ ಎಂದರೆ ಸರಿ. ಆ ಸಂಬಂಧ ಸಾಲ ಮಾಡಿರುತ್ತಾರೆ ಎಂದರೆ ಸರಿಯಲ್ಲ.

22. ಅಂದಾನಪ್ಪ ತಂದೆ ಕಾಳಪ್ಪ ರವರು ನನ್ನ ತಾತನವರಿಗೆ ಪರಿಚಯ, ಆತ ಬಂಕಾಪುರದಲ್ಲಿ ಇರುತ್ತಾರೆ, ಆ ಊರು ಸಿಂಧನೂರಿನಿಂದ 20 ಕಿ. ಮೀ. ಅಂತರದಲ್ಲಿದೆ ಎಂದರೆ ಸರಿ. ಹಾರಾಪುರದಿಂದ ಸಿಂಧನೂರಿಗೆ 60 ಕಿ. ಮೀ.ನಷ್ಟು ಅಂತರ ಇದೆ ಎಂದರೆ ಸರಿ.

23. ನೀವು ನ್ಯಾಯಾಲಯಕ್ಕೆ ಸಲ್ಲಿಸಿದ ಸಾಕ್ಷಿದಾರರ ಪಟ್ಟಿಯಲ್ಲಿರುವ ಸಾಕ್ಷಿದಾರರು ನೀವು ಹೇಳಿಕೊಟ್ಟಂತೆ ಹೇಳುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸರಿ.

24. ನಿಮ್ಮ ಮದುವೆ ಕಾಲಕ್ಕೆ ಈಗಾಗಲೇ ಬಂಗಾರದ ಆಭರಣಗಳನ್ನು ಕೊಟ್ಟಿರುತ್ತಾರೆ, ಈಗ ಕೊಡುವುದು ಇಲ್ಲ ಎಂದರೆ ಸರಿಯಲ್ಲ. ಈಗ ಭಾಗ ಕೊಡಲು ಏನೂ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿ ಮತ್ತು ಸಹೋದರರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ.

25. ನಾನು ದಾವಾ ಆಸ್ತಿಯ ಪಹಣಿಗಳನ್ನು ನೋಡಿಲ್ಲ. ಈ ದಾವೆ ಹೂಡಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ.

26. ಈ ದಾವೆಯನ್ನು ನಾನು ಮರಣಹೊಂದಿರುವ ನನ್ನ ಅಕ್ಕಂದಿರನ್ನು ಮತ್ತು ಅವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡದೆ ಈ ದಾವೆ ಹೂಡಿರುತ್ತೇನೆ ಎಂದರೆ ಸರಿ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಿಡಬ್ಲ್ಯೂ: 1** **ಅಸಲು ದಾವೆ ನಂ.37/2020**

**<u>ಮರು ವಿಚಾರಣೆ ಇಲ್ಲಃ</u>-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.